1008(795) ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಹಾಗೂ ಮುಳಗುಂದ ಪಟ್ಟಣಗಳಲ್ಲಿ ಪೊಲೀಸ್ ವಸತಿ ಗೃಹಗಳ ಕೊರತೆ ಇದೆಯೆ?

ಆ) ಎಷ್ಟು ವಸತಿ ಗೃಹಗಳ ಕೊರತೆ ಇದೆ?

ಇ) ಹಾಗಿದ್ದಲ್ಲಿ, ಅವುಗಳನ್ನು ಕಟ್ಟಿಸಲು ಕೈಗೊಳ್ಳುವ ಕ್ರಮಗಳೇನು?

ಈ) ಹಾಗೂ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಇದೆ

ಆ) ಮುಂಡರಗಿಯಲ್ಲಿ 12 ಮತ್ತು ಮುಳಗುಂದದಲ್ಲಿ 23 ಪೊಲೀಸ್ ವಸತಿ ಗೃಹಗಳ ಕೊರತೆ ಇದೆ.

ಇ) 2 ಎಸ್.ಐ. ವಸತಿ ಗೃಹಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದು, ಜನವರಿ 2006 ರೊಳಗೆ ಕಾಮಗಾರಿ ಸಂಪೂರ್ಣಗೊಳ್ಳುವ ಸಾಧ್ಯತೆ ಇದೆ. ಉಳಿದ ಸಿಬ್ಬಂದಿವರ್ಗದವರಿಗೆ ತ್ವರಿತ ವಸತಿಯೋಜನೆ–2ರಡಿಯಲ್ಲಿ ಹಣಕಾಸು ಸಂಸ್ಥೆಯವರಿಂದ ಸಾಲ ಪಡೆದು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿರ್ಮಾಣ ನಿಗಮ ನಿಯಮಿತ ರವರ ವತಿಯಿಂದ ವಸತಿ ಗೃಹಗಳನ್ನು ನಿರ್ಮಿಸಲು ಯೋಜಿಸಿದ್ದು, ಆದ್ಯತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಸಂಪನ್ಮೂಲಗಳ ಆಧಾರದ ಮೇಲೆ ಮುಂಬರುವ ಆರ್ಥಿಕ ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗುವುದು.

1010(1086) ಶ್ರೀ ಪ್ರಭಾಕರ ಬಂಗೇರ(ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2002–03ನೇ ಹಾಗೂ 2003–04ನೇ ಸಾಲಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಚಾಲ್ತಿಗೊಳಿಸಿದ ಒಟ್ಟು ಯೋಜನೆಗಳು ಎಷ್ಟು(ಅವುಗಳು ಯಾವುವು) :

ಆ) ಸದರಿ ಯೋಜನೆಗಳಿಗಾಗಿ ನಿಗಧಿಪಡಿಸಿದ ಒಟ್ಟು ಅಂದಾಜು ಮೊತ್ತ ಎಷ್ಟು ಹಾಗೂ ಅವುಗಳಿಗೆ ನಿಗಧಿಪಡಿಸಲಾದ ಮೊತ್ತ ವೆಷ್ಟು;

ಇ) 2004–05ನೇ ಸಾಲಿನಲ್ಲಿ ಹಮ್ಮಿಕೊಂಡ ಯೋಜನೆಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 2002–03 ಹಾಗೂ 2003–04ನೇ ಸಾಲಿನಲ್ಲಿ ಒಟ್ಟು ಕ್ರಮವಾಗಿ 26 ಹಾಗೂ 30 ಯೋಜನೆಗಳನ್ನು ಚಾಲ್ತಿಗೊಳಿಸಿದೆ. ವಿವರಗಳನ್ನು ಅನುಬಂಧ ಎಲ್ಲಿ ನೀಡಲಾಗಿದೆ.